CAREERINDIA

**SL. No. : DD**

ಒಟ್ಟು ಪ್ರಶ್ನೆಗಳ ಸಂಖ್ಯೆ : 64 ]
Total No. of Questions : 64 ]

**CCE PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 01-K** **Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 15. 06. 2017 ] [ Date : 15. 06. 2017

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 125 ] [ Max. Marks : 125

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 64 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

www.careerindia.com

CAREERINDIA



## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $16 \times 1 = 16$

1. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ತಿಳಿದುಕೊಂಡಿರುವ ಅಂಶಗಳು ಯಾವುವು ?
2. ಅಂತರ್‌ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ ?
3. ಬುಕ್ಕರಾಯನ ರಾಜ್ಯಭಾರಕಾಲದಲ್ಲಿ ಯಾರು ಯಾರಿಗೆ ಸಂವಾದ ನಡೆಯಿತು ?
4. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು ?
5. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಬರೆದವರು ಯಾರು ?
6. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?
7. ಗಾಂಡೀವಿ ಎಂದು ಯಾರನ್ನು ಕರೆಯುತ್ತಾರೆ ?
8. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?
9. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?
10. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆಂದು ಜೇಡರ ದಾಸಿಮಯ್ಯ ಹೇಳಿದ್ದಾರೆ ?
11. ಜಿ.ಎಸ್. ಶಿವರುದ್ರಪ್ಪನವರ ಪ್ರಕಾರ ನದಿ ಜಲಗಳು ಏನಾಗಿವೆ ?
12. ನಕುಲ–ಸಹದೇವರು ಯಾವ ದೇವರ ವರಬಲದಿಂದ ಜನಿಸಿದರು ?
13. ದು. ಸರಸ್ವತಿಯವರು ಸಂಕಟಕ್ಕೆ ಯಾವುದು ಇಲ್ಲ ಎಂದಿದ್ದಾರೆ ?
14. ದು. ಸರಸ್ವತಿಯವರು ಮಣ್ಣಿನ ಮಾಲಿಕ ಯಾರು ಎಂದಿದ್ದಾರೆ ?
15. ಸು.ರಂ. ಎಕ್ಕುಂಡಿಯವರು ಏನನ್ನು ತೊರೆದು ಬಾಳಬೇಕು ಎಂದಿದ್ದಾರೆ ?
16. ಪಾರಿವಾಳಗಳಿಗೆ ಯಾವಾಗ ಆನಂದವಾಯಿತು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತರ ಬರೆಯಿರಿ :** $16 \times 2 = 32$

17. 'ಧರ್ಮ ಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗ ಕೊಂಡಾಡಲಾಗಿದೆ ?
18. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
19. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆ ಯಾವುದು ?
20. ವಚನಧರ್ಮದ ಬಗೆಗೆ ದೇವನೂರರ ಅಭಿಪ್ರಾಯವನ್ನು ತಿಳಿಸಿ.
21. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ?
22. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?
23. ಶಾನುಭೋಗರು 'ದೇವರೇ ಮರ ಹತ್ತುವಷ್ಟು ಅವಕಾಶ ಕರುಣಿಸು' ಎಂದು ಬೇಡಲು ಕಾರಣವೇನು ?
24. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?
25. ಹಲಗಲಿಗೆ ದಂಡು ಬರಲು ಕಾರಣ ತಿಳಿಸಿ.



www.careerindia.com

CAREERINDIA



26. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ತಿಳಿಸಿ.
27. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
28. 'ನನ್ನಾಸೆ' ಪದ್ಯದಲ್ಲಿ ಕವಯಿತ್ರಿ 'ಜೋಗುಳ' ಮತ್ತು 'ಗ್ರಂಥ' ಆಗಬೇಕೆಂದು ಹೇಳಲು ನೀಡಿದ ಕಾರಣಗಳೇನು ?
29. ಹೆಚ್. ನರಸಿಂಹಯ್ಯನವರ ಪ್ರಕಾರ ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ತಿಳಿಸಿ.
30. ಪಂಪ ತನ್ನ ಹೆಸರನ್ನು ಬಂಡೆಯ ಮೇಲೆ ಏಕೆ ಕೆತ್ತಿಸಲಿಲ್ಲ ?
31. ಬಾಳಿನಲ್ಲಿ ತೃಪ್ತಿದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ ?
32. 'ತಾವರೆ ಬೇರು' ಎಂಬ ಉತ್ತರ ಬರಲು ಹೇಳಿದ ಒಗಟನ್ನು ಬರೆಯಿರಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** $6 \times 3 = 18$

33. "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ"
34. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
35. "ಪೊನ್ನನೆಲ್ಲಮಂ ನೀನೆ ಕೊಂಡೆ"
36. "ಹೊಸಗಾಲದ ಹಸು ಮಕ್ಕಳ ಹರಸಿ"
37. "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ"
38. "ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

39. ವಿ.ಕೃ. ಗೋಕಾಕ್
40. ಲಕ್ಷ್ಮೀಶ
41. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

ನೀನುಳ್ಳೊಡೆ ..............................................................

.........................................................................

.........................................................................

........................................................... ನಂದಿದೊಡೇಂ.

*ಅಥವಾ*

ಕುರುಕುಳ ನಂದನಂ ....................................................

.........................................................................

.........................................................................

...................................................... ತಂದೆಗಿಂಬುಕೆಯ್.



www.careerindia.com

CAREERINDIA



42. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ.

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

43. ಶಬರಿಯ ಸಡಗರ ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಶಬರಿಯ ಚಿಂತೆ ಹಿಂಗಿ ಹೋಗಿ ಆಕೆಯ ಅಭೀಷ್ಟ ಸಿದ್ಧಿಸಿದ ಬಗೆಯನ್ನು ವಿವರಿಸಿ.

44. ಕವಿ ಶಿವರುದ್ರಪ್ಪನವರು ಆಶಿಸಿದಂತೆ ನಾವು ಕೈಗೊಳ್ಳಬೇಕಾದ ಸಂಕಲ್ಪಗಳನ್ನು ವಿವರಿಸಿ.

***ಅಥವಾ***

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ಸಂಗ್ರಹಿಸಿ ಬರೆಯಿರಿ.

45. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 2 × 2 = 4

ಮಹಾತ್ಮ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ, ಸ್ವಾತಂತ್ರ್ಯ ಸಮಾನತೆ ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಈ ನೆಲದ ಮೇಲೆ ನಡೆದಾಡಿ ಸುಮಾರು ಎಂಟುನೂರು ವರ್ಷಗಳು ಆಗಿಹೋದುವು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ಸಮಾಜ ಇಂದಿಗೂ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿಲ್ಲವೆಂಬುದನ್ನು ಗಮನಿಸಿದಾಗ ಅಷ್ಟು ಹಿಂದೆಯೇ ಅವರು ಕಂಡ ಕನಸು ಮತ್ತು ಅದನ್ನು ನನಸು ಮಾಡಲು ನಡೆಸಿದ ಹೋರಾಟ ಎಷ್ಟು ದೊಡ್ಡದೆಂಬುದು ಅರಿವಾಗದಿರದು. ದೇವಲೋಕ, ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು ಬಸವಣ್ಣ. ಅವರ ದೃಷ್ಟಿಯಲ್ಲಿ ದೇವಲೋಕ ಎಲ್ಲೋ ಇರುವಂಥದ್ದಲ್ಲ, ಸತ್ತ ಮೇಲೆ ಗಳಿಸುವಂಥದ್ದಲ್ಲ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಬಸವಣ್ಣನವರು ಪರವನ್ನು ಮರೆಯದೆ, ಇಹ ಜೀವನದ ಶುದ್ಧಿ ಆರ್ಜವಗಳಿಗೆ ಪರಮ ಪ್ರಾಶಸ್ತ್ಯ ಕೊಡುತ್ತಾರೆ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ'. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ.



www.careerindia.com

CAREERINDIA



ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗಕ್ಕೆ ತೂರಿಕೊಳ್ಳುವುದು ಸಾಧ್ಯವಿಲ್ಲ, ಅಂಥ ಯಾವ ಸುಲಭೋಪಾಯವೂ ಇಲ್ಲ. ಸ್ವರ್ಗದ ಕೀಲಿಕೈ ಇರುವುದು ಮರ್ತ್ಯದಲ್ಲಿ; ಅದನ್ನು ಇಲ್ಲೇ ಕಷ್ಟಪಟ್ಟು ಸಂಪಾದಿಸಬೇಕು. ಹೀಗೆ ಇಹವನ್ನೇ ಪರವಾಗಿ ಅರಳಿಸುವ ಕ್ರಾಂತಿಕಾರಕ ಮನೋಧರ್ಮ ಮತ್ತು ಧರ್ಮ ಬಸವಣ್ಣನವರದು.

*ಪ್ರಶ್ನೆಗಳು :*

ಅ) ಬಸವಣ್ಣನವರು ಮರ್ತ್ಯಲೋಕಕ್ಕೆ ನೀಡಿದ ಹೊಸ ಅರ್ಥ ತಿಳಿಸಿ.

ಆ) ಬಸವಣ್ಣನವರು ಎಂತಹ ಸಮಾಜವನ್ನು ಕಟ್ಟ ಬಯಸಿದ್ದರು ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 10 × 1 = 10

46. 'ವಧೂಪೇತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ ಸಂಧಿ (ಬಿ) ಸವರ್ಣದೀರ್ಘ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಲೋಪ ಸಂಧಿ

47. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವು

(ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ

(ಸಿ) ಸಂಯೋಜಿತವಾಕ್ಯ (ಡಿ) ಉಪವಾಕ್ಯ

48. 'ಗಮಕ' ಸಮಾಸಕ್ಕೆ ಉದಾಹರಣೆಯಾಗಿರುವ ಪದವಿದು

(ಎ) ಕಂಗೆಡು (ಬಿ) ನೆಯ್ದುವಸ್ತ್ರ

(ಸಿ) ಕಡೆಗಣ್ಣು (ಡಿ) ಮೆಲ್ವಾತು

49. ಕನ್ನಡದಲ್ಲಿ ಬಳಕೆಯಾಗುತ್ತಿರುವ ಹಿಂದೂಸ್ಥಾನಿ ಭಾಷೆಯ ಪದ ಇದಾಗಿದೆ

(ಎ) ಇಲಾಖೆ (ಬಿ) ತರಬೇತು

(ಸಿ) ಕಾಗದ (ಡಿ) ರಸೀದಿ

50. ಸಪ್ತಮಿ ವಿಭಕ್ತಿ ಪ್ರತ್ಯಯಯುಕ್ತ ಪದ ಇದು

(ಎ) ಮರದಿಂ (ಬಿ) ಮರದತ್ತಣಿಂ

(ಸಿ) ಮರದ (ಡಿ) ಮರದೊಳ್

www.careerindia.com

51. 'ಅವನೇ, ಅದುವೇ' ಎಂಬ ಪದಗಳು ಅವ್ಯಯದ ಈ ಗುಂಪಿಗೆ ಸೇರುತ್ತದೆ

(ಎ) ಅವಧಾರಣಾರ್ಥಕಾವ್ಯಯ (ಬಿ) ಸಂಬಂಧಾರ್ಥಕಾವ್ಯಯ

(ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

52. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲಾ ಬಳಸುವ ಲೇಖನ ಚಿಹ್ನೆ

(ಎ) ಅಲ್ಪವಿರಾಮ (ಬಿ) ಅರ್ಧವಿರಾಮ

(ಸಿ) ಪೂರ್ಣವಿರಾಮ (ಡಿ) ಆವರಣ ಚಿಹ್ನೆ

53. ಅನ್ವರ್ಥನಾಮಕ್ಕೆ ಉದಾಹರಣೆ

(ಎ) ಪರ್ವತ (ಬಿ) ಸಹದೇವ

(ಸಿ) ವಿಜ್ಞಾನಿ (ಡಿ) ಒಳ್ಳೆಯ

54. 'ಮಾಡಿಯಾನು' ಪದವು ಕ್ರಿಯಾಪದದ ಈ ರೂಪಕ್ಕೆ ಸೇರಿದೆ

(ಎ) ಪ್ರಶ್ನಾರ್ಥಕ (ಬಿ) ನಿಷೇಧಾರ್ಥಕ

(ಸಿ) ವಿಧ್ಯರ್ಥಕ (ಡಿ) ಸಂಭಾವನಾರ್ಥಕ

55. 'ತನ, ಇಕೆ, ಪು, ಮ' ಪ್ರತ್ಯಯಗಳುಳ್ಳ ಪದಗಳನ್ನು ಹೀಗೆನ್ನುತ್ತೇವೆ

(ಎ) ತದ್ಧಿತಾಂತ ಭಾವನಾಮ (ಬಿ) ಕೃದಂತಾವ್ಯಯ

(ಸಿ) ಕೃದಂತ ಭಾವನಾಮ (ಡಿ) ತದ್ಧಿತಾಂತಾವ್ಯಯ

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** $4 \times 1 = 4$

56. ಅಬ್ಧಿಪ : ವರುಣ :: ಉರ್ವಿ : ........................ .

57. ಸತಿಪತಿ : ಜೋಡುನುಡಿ :: ಅಬ್ಬಬ್ಬಾ : ........................ .

58. ಸಂದೇಹ : ಸಂದೆಯ :: ವ್ಯಯ : ........................ .

59. ಇಸವಾಸ : ವಿಶ್ವಾಸ :: ಮ್ಯಾಗ : ........................ .

60. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** $1 \times 3 = 3$

ಚಾಗದ ಭೋಗದಕ್ಕರದ ಗೇಯದಗೊಟ್ಟಿಯ ಲಂಪಿನಿಂಪುಗಳ್

***ಅಥವಾ***

ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

CAREERINDIA



61. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 × 3 = 3

ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.

**ಅಥವಾ**

ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

62. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :** 1 × 3 = 3

* ಕ್ಯಕೆಸರಾದರೆ ಬಾಯಿ ಮೊಸರು
* ದೇಶ ಸುತ್ತು ಕೋಶ ಓದು
* ತಾಳಿದವನು ಬಾಳಿಯಾನು

63. ನಿಮ್ಮನ್ನು ಬಾದಾಮಿಯ ಸಿದ್ಧಗಂಗಾ ಪ್ರೌಢಶಾಲೆಯ 'ನಂದಿನಿ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗ್ರಂಥ ಸಪ್ತಾಹ'ದ ಮುಕ್ತಾಯ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಪ್ರಜಾವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. 1 × 5 = 5

**ಅಥವಾ**

ನಿಮ್ಮನ್ನು ಕುಪ್ಪಳ್ಳಿ ಸರ್ಕಾರಿ ಪ್ರೌಢಶಾಲೆಯ 'ರಂಜಿತ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಲಿರುವ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಮೈಸೂರಿನ ಸದಾಶಿವನಗರದಲ್ಲಿ ವಾಸವಾಗಿರುವ ತಂದೆ 'ಶಿವಪ್ಪ'ನವರಿಗೆ ಪತ್ರವೊಂದನ್ನು ಬರೆಯಿರಿ.

64. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

* ಯೋಗಾಭ್ಯಾಸದ ಮಹತ್ವ
* ದೇಶದ ಐಕ್ಯತೆಯಲ್ಲಿ ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ
* ವಿದ್ಯಾರ್ಥಿಗಳಿಗೆ ಗಣಕಯಂತ್ರದ ಸದುಪಯೋಗ



www.careerindia.com

www.careerindia.com